# ನವಿಲುಗನ್ನಡಿ

- ಹೊಸ ವರುಷದ ಮೊದಲ ಸಂಚಿಕೆಯಲ್ಲಿ, ಕಥೆಗಾರ ಎಸ್. ದಿವಾಕರ್ ಅವರ ಲಂಡನ್ ಪ್ರವಾಸಾನುಭವದ ಹರಟೆ ರೂಪದ 'ಬಾಡಿಗೆ ಕವಿ' ಕುರಿತ ಬರಹ ಬಹಳ ಸ್ವಾರಸ್ಯಪೂರ್ಣವಾಗಿತ್ತು. ಯಶಸ್ಸು, ಜನಪ್ರಿಯತೆ ಅನುಭವಿಸುವ ಕೆಲವು ಸಿನಿಮಾ ಕವಿಗಳು, ಸಮಯದ (ಸ್ಫೂರ್ತಿ) ಒತ್ತಡ ನಿಯಂತ್ರಿಸಲು, ತಮಗೆ ಆಪ್ತರಾದ ಅನಾಮಿಕ ಕವಿಗಳ ಪದ್ಯಗಳನ್ನು ಬಾಡಿಗೆ ತೆತ್ತು ಬಳಸುತ್ತಾರೆಂದು ಕೇಳಿದ್ದುಂಟು. ಪ್ರಸಿದ್ಧ ಜಾನಪದ ತಜ್ಞ ದಿ.ಎಸ್.ಕೆ. ಕರೀಂಖಾನ್‌ರಂಥ ಪ್ರತಿಭಾನ್ವಿತರು ಮದ್ರಾಸಿಗೆ ಹೋಗಿದ್ದಾಗ, ಹೆಸರಾಂತ ಸಿನಿಮಾ ಕವಿಗಳೇ ಅವರಿಂದ ಬರೆಸಿದ ಹಾಡುಗಳನ್ನು ತಮ್ಮ ಹೆಸರಿನಿಂದ ರಿಕಾರ್ಡು ಮಾಡಿಕೊಳ್ಳುತ್ತಿದ್ದರಂತೆ. ಇದೇನು ಅಕ್ರಮ ವ್ಯವಹಾರವಲ್ಲ; ಮನರಂಜನಾ ಜಗತ್ತಿನ 'ಇನ್‌ಸ್ಟಂಟ್' ಬೇಡಿಕೆ– ಪೂರೈಕೆ ವ್ಯವಹಾರ ಅಷ್ಟೇ. ಕಾವ್ಯ ಜಗತ್ತಿನ ಪಾವಿತ್ರ್ಯ ನಷ್ಟವೂ ಅಲ್ಲ.

**ಸರ್ವಜಿತ, ಹುಬ್ಬಳ್ಳಿ**

- ಕಲ್ಲೇಶ್ ಕುಂಬಾರ್ ಅವರ 'ಮನದ ವಿರಕ್ತಿ' ಕಥೆಯಲ್ಲಿ ಕಲ್ಲವ್ವ ತನ್ನ ಹೊಲವನ್ನು ಮಠಕ್ಕೆ ಬರೆವ ಇಲ್ಲವೇ ತಾನೇ ಮಠದ ಸೇವೆ ಮಾಡುವ ನಿರ್ಧಾರ ತೆಗೆದುಕೊಳ್ಳುವಲ್ಲಿ ಕಥೆ ಮುಕ್ತಾಯವಾಗುತ್ತದೆ. ಅಂದರೆ ಕಲ್ಲವ್ವನಲ್ಲಿ ರಕ್ತಸಂಬಂಧಗಳ ಬಗ್ಗೆ ಎಳ್ಳಷ್ಟೂ ನಂಬಿಕೆಯುಳಿದಿಲ್ಲ ಎಂಬುದು ಸ್ಪಷ್ಟಗೊಂಡಂತಿದೆ. ಬದುಕಿನಲ್ಲಿ ಬಹುಮುಖ್ಯ ಪ್ರಶ್ನೆಯಾದ 'ರಕ್ತಸಂಬಂಧ'ಗಳ ಮೇಲೆ ನಮಗೆ ಮೂಡುವ ವಿವೇಚನೆ ಇಲ್ಲಿ ಪ್ರಶ್ನಾತೀತವೇನಲ್ಲ! .

**ರವಿ ಪಾಟೀಲ, ಬೆಳಗಾವಿ**

- ಮಧುರಾ ಕರ್ಣಮ್ ಅವರ 'ಕಣ್ಣಾಮುಚ್ಚೇ ಕಾಡೇ ಗೂಡೇ' ವರ್ತಮಾನಕ್ಕೆ ಸ್ಪಂದಿಸುವ ಕಥೆಯಾಗಿದೆ. ಒಂದು ಕಡೆ ಜಮೀನ್ದಾರಿ ವ್ಯವಸ್ಥೆಯ ಶೋಷಣೆ ಇನ್ನೊಂದು ಕಡೆ ಕ್ರೈಸ್ತ ಪಾದ್ರಿ ಡಿಸೋಜಾ ಅವರ ಮಾನವೀಯತೆ– ನಂಜುಂಡ, ಮಹಾದೇವಿ, ಬಸನಿಂಗನ ಬದುಕಿಗೆ ನೆಲೆಯನ್ನು ನೀಡುತ್ತದೆ. ಒಂದು ಕಿತ್ತುಕೊಳ್ಳುವ ಪ್ರವೃತ್ತಿಯಾದರೆ ಇನ್ನೊಂದು ನೀಡುವ ಪ್ರವೃತ್ತಿಯಾಗಿದೆ

**ದೇವೀಂದ್ರಪ್ಪ ಬಿ.ಕೆ.**




- 'ತಾಳಮದ್ದಳೆಯಲ್ಲಿ 'ಅಹಂ'ಗೆ ಜಾಗವಿಲ್ಲ' ಎಂ.ಪ್ರಭಾಕರ ಜೋಶಿ ಸಂದರ್ಶನ (ಕೋಡಿಬೆಟ್ಟು ರಾಜಲಕ್ಷ್ಮಿ) ವಿದ್ವತ್ ಪೂರ್ಣವಾಗಿದೆ. ತತ್ವಶಾಸ್ತ್ರ ಎಂಬುದು ಒಂದು ವಿಷಯವಲ್ಲ, ಬದಲಿಗೆ ದೇವನನ್ನು ನೋಡುವ ಒಂದು ವಿಧಾನ. ಹೀಗಾಗಿ ಪ್ರತಿಯೊಬ್ಬನೂ ತತ್ವಜ್ಞಾನಿಯೇ ಎಂಬುದು ಎಷ್ಟೊಂದು ಅರ್ಥಗರ್ಭಿತವಾದದ್ದು.

**ಶಂಕರನಾರಾಯಣ ಭಟ್, ಮಾಡಗೇರಿ**

- 'ನನ್ನ ಓದು' ಅಂಕಣದಲ್ಲಿ ಕವಿ ಸುಬ್ಬು ಹೊಲೆಯಾರ್ ಅವರ ದುಃಖ ಆರದ ನೆಲದಲ್ಲಿ' ಕೃತಿ ಕುರಿತು ಪ್ರೊ.ಎಂ. ನಾರಾಯಣಸ್ವಾಮಿ ತ್ಯಾವನಹಳ್ಳಿ ಅವರ ವಿಶ್ಲೇಷಣೆ ಓದಿದೆ. ಆಗ ನನಗೆ ತಕ್ಷಣದಲ್ಲಿ ಅನ್ನಿಸಿದ್ದು ವಿಜ್ಞಾನಿಗಳು ಮನುಷ್ಯನಲ್ಲಿ ಸಂತೋಷಕ್ಕೆ ಕಾರಣವಾಗಬಲ್ಲ ಚೋದಕಗಳನ್ನು ಪ್ರಯೋಗಶಾಲೆಯಲ್ಲಿ ತಯಾರಿಸಿದ್ದೇ ಆದರೆ, ಅವುಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಿ ಜನರನ್ನು ಸದಾಕಾಲ ಸಂತೋಷವಾಗಿಡಬಹುದಲ್ಲವೇ ಎಂದು.

**ಗುರುರಾಜ ಹ. ನಾಯಕ, ಬೆಂಗಳೂರು**